**ಎಸ್.ಸಿ.ಸಂಖ್ಯೆಃ 10035/2025**
**ಪ್ರಾ.ಸಾ.ಸಂಖ್ಯೆಃ 12**
**ಚಾ.ಸಾ.ಸಂಖ್ಯೆಃ 31**

**<u>ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ</u>**

**ಎಸ್.ಸಿ.ಸಂಖ್ಯೆಃ 10035/2025**

| | |
|---|---|
| ಹೆಸರುಃ | ಸಂಗಮನಾಥ ಹೊಸಮನಿ |
| ತಂದೆಯ ಹೆಸರುಃ | ಹನಮಂತ |
| ವಯಸ್ಸುಃ | **40** ವರ್ಷ |
| ಉದ್ಯೋಗಃ | ಪಿ.ಐ. ಲೋಕಾಯುಕ್ತ ಪಿ.ಎಸ್. ಬೆಳಗಾವಿ |
| ವಾಸಃ | ಬೆಳಗಾವಿ |

**ಸಾಕ್ಷಿಯನ್ನು ದಿಃ 24.02.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-</u>**

ನಾನು ದಿಃ **08.05.2022** ರಿಂದ **15.06.2023** ವರೆಗೆ ಪಿ ಎಸ್ ಐ ಅಂತಾ ಮುಧೋಳ ಠಾಣೆಯಲ್ಲಿ ಕೆಲಸ ಮಾಡಿದ್ದೇನೆ.

**1.** ದಿ: **18.05.2023** ರಂದು ಚಾಸಾ-**26** ಹಾಗೂ **24** ಇವರನ್ನು ಬಾಗಲಕೋಟೆಯ ಕೆರೂಡಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಚಾಸಾ-**1** ಇವರ ಹೇಳಿಕೆಯನ್ನು ಪಡೆಯಲು ಕಳುಹಿಸಿಕೊಟ್ಟಿದ್ದು, ಸಾಯಂಕಾಲ **5-45** ಗಂಟೆಗೆ ಚಾಸಾ-**26** ರವರು ಗಾಯಾಳುವಿನ ಹೇಳಿಕೆ ಪಿರ್ಯಾದಿಯನ್ನು ನಿಪಿ-**15** ರಂತೆ ಪಡೆದುಕೊಂಡು ಬಂದು ಹಾಜರುಪಡಿಸಿರುತ್ತಾರೆ. ನಾನು ಅದರ ಆಧಾರ ಮೇಲಿಂದ ನಮ್ಮ ಠಾಣಾ ಗುನ್ನಾ ನಂ. **135/2023** ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು, ಈಗ ನೋಡುತ್ತಿರುವ ಪ್ರ.ವ.ವರದಿಯನ್ನು ಸಲ್ಲಿಸಿದ್ದೇನೆ. (ಅದನ್ನು ನಿಪಿ-**32** ಅಂತ ಗುರುತಿಸಲಾಯಿತು). ನಂತರ ದೂರು ಹಾಗೂ ಪ್ರ.ವ.ವರದಿಯನ್ನು ಚಾಸಾ-**19** ರವರ ಮೂಲಕ ಮಾನ್ಯ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟೆ. ಅವರು ಸದರಿ ದೂರು ಹಾಗೂ ಪ್ರ.ವ.ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ ಬಂದು ನಿಪಿ-**1** ರಂತೆ ವರದಿ ನೀಡಿರುತ್ತಾರೆ.

**2.** ಚಾಸಾ-**26** ರವರು ನಿಪಿ-**15** ರೊಂದಿಗೆ ನಿಪಿ-**31** ನ್ನು ಹಾಗೂ ಈಗ ನೋಡುತ್ತಿರುವ ಎಮ್.ಎಲ್. ಸಿ ಮಾಹಿತಿಯನ್ನು ಸಲ್ಲಿಸಿರುತ್ತಾರೆ. (ಸದರಿ ಎಮ್.ಎಲ್.ಸಿ. ಮಾಹಿತಿಯನ್ನು ನಿಪಿ-**33** ಅಂತ ಗುರುತಿಸಲಾಯಿತು). ಅದೇ ದಿನ ಚಾಸಾ-**20** ರಿಂದ **23** ರವರಿಗೆ ಆರೋಪಿತರನ್ನು ಬಂಧಿಸಿ

**ಎಸ್.ಸಿ.ಸಂಖ್ಯೆ: 10035/2025**
**ಪ್ರಾ.ಸಾ.ಸಂಖ್ಯೆ: 12**
**ಚಾ.ಸಾ.ಸಂಖ್ಯೆ: 31**

ಹಾಜರುಪಡಿಸುವಂತೆ ಆದೇಶಿಸಿದೆ. ಅವರು **1, 3** ರಿಂದ **5** ನೇ ಆರೋಪಿತರನ್ನು ಮುಧೋಳ ಬಸ್ಟ್ಯಾಂಡ ಹತ್ತಿರದ ಮಂಟೂರ ರಸ್ತೆಯಿಂದ ಸಂಜೆ **7-00** ಗಂಟೆಗೆ ನನ್ನ ಮುಂದೆ ಹಾಜರುಪಡಿಸಿ ನಿಪಿ-**7** ರಿಂದ **9** ರಂತೆ ವರದಿ ನೀಡಿರುತ್ತಾರೆ.

**3.** ನಾನು ಸದರಿ ಆರೋಪಿತರನ್ನು ವಿಚಾರಣೆ ಮಾಡಲಾಗಿ ಅವರು ಸದರಿ ಕೃತ್ಯವನ್ನು ಮಾಡಿರುವುದಾಗಿ ಒಪ್ಪಿಕೊಂಡಿದ್ದರಿಂದ ಅವರನ್ನು ದಸ್ತಗಿರಿ ಮಾಡಿ, ವೈದ್ಯಕಿಯ ಪರೀಕ್ಷೆ ಮಾಡಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಂತರ ದಿ: **19.05.2023** ರಂದು ಚಾಸಾ-**9** ರವರು ತೋರಿಸಿದಂತೆ ಚಾಸಾ-**2** ಹಾಗೂ **3** ರವರ ಸಮಕ್ಷಮದಲ್ಲಿ ನಿಪಿ-**21** ರಂತೆ ಗುನ್ಹಾ ಜಾಗೆ ಪಂಚನಾಮೆಯನ್ನು ಮಾಡಿದ್ದೇನೆ. ಸ್ಥಳದಿಂದ ಮುಮಾ-**1** ರಿಂದ **3** ನ್ನು ಜಪ್ತ ಮಾಡಿಕೊಂಡಿದ್ದೇನೆ. ಆಗ ನಿಪಿ-**16** ರಿಂದ **19** ರ ಫೋಟೊಗಳನ್ನು ತೆಗೆಸಿದ್ದು, ಕಚ್ಚಾ ನಕ್ಷೆಯನ್ನು ತೆಗೆದಿರುತ್ತೇನೆ. ನಂತರ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿದ್ದೇನೆ.

**4.** ಅದೇ ದಿನ ಚಾಸಾ-**25** ಇವರ ಕಡೆಯಿಂದ ನಿಪಿ-**12** ರಂತೆ ಭಾರತಿಯ ಸಾಕ್ಷ್ಯ ಅಧಿನಿಯಮ ಕಲಂ **65(ಬಿ)** ರಡಿಯಲ್ಲಿ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-**6** ರಿಂದ **17** ಇವರ ಹೇಳಿಕೆಗಳನ್ನು ಪಡೆದಿದ್ದೇನೆ. ದಿ: **20.05.2023** ರಂದು ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಭೇಟಿ ನೀಡಿ ಪಿರ್ಯಾದುದಾರರ ಪುರವಣಿ ಹೇಳಿಕೆ ಪಡೆದಿರುತ್ತೇನೆ. ಪಿರ್ಯಾದುದಾರರ ರಕ್ತದ ಗುಂಪನ್ನು ಪರಿಕ್ಷೆ ಮಾಡಿ ತಿಳಿಸಲು ವೈದ್ಯಾಧಿಕಾರಿಗಳಿ ಈಗ ನೋಡುತ್ತಿರುವ ಮನವಿ ನೀಡಿದ್ದೇನೆ. (ಅದನ್ನು ನಿಪಿ-**34** ಅಂತ ಗುರುತಿಸಲಾಯಿತು).

**5.** ದಿ: **22.05.2023** ರಂದು ಕೆರೂಡಿ ಆಸ್ಪತ್ರೆಯಿಂದ ಬಂದ ರಕ್ತದ ಗುಂಪಿನ ವರದಿ ನಿಪಿ-**30** ನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿದ್ದೇನೆ. ದಿ: **30.05.2023** ರಂದು ಚಾಸಾ-**20** ರವರ ಮುಖಾಂತರ ಜಪ್ತಾದ ಮುದ್ದೆಮಾಲುಗಳನ್ನು ರಾಸಾಯನಿಕ ಪರಿಕ್ಷೆಗಾಗಿ ಬೆಳಗಾವಿಯ ಆರ್.ಎಪ.ಎಸ್.ಎಲ್.ಗೆ ಕಳುಹಿಸಿಕೊಟ್ಟಿರುತ್ತೇನೆ. ಆ ಬಗ್ಗೆ ಮನವಿಯನ್ನು ವಿದ್ಯುನ್ಮಾನ ಅಂಚೆ ಮೂಲಕ ಕಳುಹಿಸಿರುತ್ತೇನೆ. ಅದೇ ದಿನ ಚಾಸಾ-**20** ಇವರು ಸದರಿ ಮುದ್ದೆಮಾಲುಗಳನ್ನು ಆರ್.ಎಪ್.ಎಸ್.ಎಲ್. ಬೆಳಗಾವಿ ಇವರಿಗೆ

ತಲುಪಿಸಿ ನಿಪಿ-**4** ರಂತೆ ಸ್ವೀಕೃತಿ ಪತ್ರವನ್ನು ತಂದು ಹಾಜರುಪಡಿಸಿದ್ದು, ನಿಪಿ-**3** ರಂತೆ ವರದಿ ನೀಡಿದ್ದಾರೆ.

**6.** ದಿ: **03.06.2023** ರಂದು ಬಾಗಲಕೋಟೆಯ ಕೆರೂಡಿ ಆಸ್ಪತ್ರೆಯಿಂದ ಚಾಸಾ-**1** ಇವರ ಬಿಡುಗಡೆ ಪ್ರಮಾಣ ನಿಪಿ-**28** ಇದನ್ನು ಚಾಸಾ-**28** ಇವರ ಕಡೆಯಿಂದ ಪಡೆದುಕೊಂಡೆ. ಅದೇ ದಿನ **27** ಇವರಿಂದ ಗಾಯಾಳುವಿನ ಗಾಯದ ಪ್ರಮಾಣ ಪತ್ರ ನಿಪಿ-**23** ನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡೆ. ದಿ: **15.06.2023** ರಂದು ನನಗೆ ವರ್ಗಾವಣೆಯಾಗಿದ್ದರಿಂದ ಮುಂದಿನ ತನಿಖೆಯನ್ನು ಚಾಸಾ-**32** ಇವರಿಗೆ ವಹಿಸಿಕೊಟ್ಟೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಗುರುತಿಸುತ್ತೇನೆ.

**ಪಾಟಿಸವಾಲು: 3 ರಿಂದ 5ನೇ ಆರೋಪಿ ಪರ ಶ್ರೀ. ಎಸ್.ಜಿ.ಸಿ. ವಕೀಲರಿಂದ:**

**1.** ನಾನು ಜಾತಿ ಆಧಾರಿತ ರಾಜಕೀಯದ ಪ್ರೇರಣೆಯಿಂದಾಗ ಈ ಪ್ರಕರಣ ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿಲ್ಲ, ಯಾವುದೇ ಪಂಚನಾಮೆಯನ್ನು ಮಾಡಿಲ್ಲ, ಮುಮಾ-**1** ರಿಂದ **3** ನ್ನು ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ದೂರು ಇದೆ ಅಂತ ಗೊತ್ತಿದ್ದರೂ ಕೂಡ ಅಸಮರ್ಪಕವಾಗಿ ತೋರಿಕೆಯ ತನಿಖೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. **3** ರಿಂದ **5**ನೇ ಆರೋಪಿತರು ಈ ಪ್ರಕರಣಕ್ಕೆ ಸಂಬಂಧವಿಲ್ಲ ಅಂತ ಗೊತ್ತಿದ್ದರೂ ಕೂಡ ಅವರನ್ನು ಬಂಧಿಸಿದ್ದೇವೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು:1 ಹಾಗೂ 2ನೇ ಆರೋಪಿ ಪರ ಶ್ರೀ. ಎ.ಎಸ್.ಎಸ್. ವಕೀಲರಿಂದ:**

1. ನಾನು ಗಾಯದ ಪ್ರಮಾಣ ಪತ್ರ ನಿಪಿ-23 ನ್ನು ಪ್ರಕರಣದ ಸಲುವಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಗುನ್ನೆ ಮಾಡಿಲ್ಲ ಅಂತ ಕಂಡು ಬಂದರೂ ಕೂಡ ಅವರ ವಿರುದ್ಧ ಸುಳ್ಳು ಪ್ರಕರನ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ತನಿಖೆ

ಮಾಡಿಲ್ಲ, ಯಾವುದೇ ಪಂಚನಾಮೆ ಮಾಡಿಲ್ಲ, ಯಾವುದೇ ವಸ್ತುಗಳನ್ನು ಜಪ್ತ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿ ಅದೆ.

**ಸಹಿ/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**